ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 4 ಜಿಆರ್‌ಟಿ(2) 2013.

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು 560 001.
ದಿನಾಂಕ:1-7-2013.

ಸುತ್ತೋಲೆ

ವಿಷಯ:-ಅನುದಾನಿತ ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿ ವರ್ಗದವರಿಗೆ 1-1-2006 ರಿಂದ 31-3-2010 ರವರೆಗಿನ ಪರಿಷ್ಕೃತ"ಎಐಸಿಟಿಇ" ವೇತನದ ಬಾಕಿ ಅನುದಾನ ಬಿಡುಗಡೆ ಬಗ್ಗೆ.

ಉಲ್ಲೇಖ: 1.ಸರ್ಕಾರಿ ಆದೇಶ ಇಡಿ 96 ಡಿಟಿಇ 2010 ದಿ:7-3-2011
2.ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್, ನವದೆಹಲಿ ಇವರ ಅಧಿಸೂಚನೆ ಸಂ.ಎಫ್.ನಂ.37-3/ಲೀಗಲ್/2010, ದಿನಾಂಕ:05.03.2010

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ಆದೇಶದಲ್ಲಿ, ಸರ್ಕಾರವು ಇಂಜಿನಿಯರಿಂಗ್ ಕಾಲೇಜುಗಳ ಬೋಧಕ ಸಿಬ್ಬಂದಿವರ್ಗದವರಿಗೆ ದಿನಾಂಕ:01.01.2006 ರಿಂದ ಅನ್ವಯಿಸುವಂತೆ ಪರಿಷ್ಕೃತ 'ಎಐಸಿಟಿಇ' ವೇತನಶ್ರೇಣಿಯನ್ನು ವಿಸ್ತರಿಸಿದ್ದು, ಇಲಾಖಾವತಿಯಿಂದ ಪರಿಷ್ಕೃತ ವೇತನಶ್ರೇಣಿಯನ್ನು ನಿಗದಿಗೊಳಿಸಿ ದಿನಾಂಕ:7.3.2011 ರಿಂದ ಪರಿಷ್ಕೃತ ವೇತನವನ್ನು ಪಾವತಿಸಲಾಗಿದೆ. ಉಲ್ಲೇಖ (2) ರ ಅಧಿಸೂಚನೆಯಲ್ಲಿ ದಿನಾಂಕ:1.4.2010 ರ ನಂತರದ ಅವಧಿಯ ವೇತನವನ್ನು ರಾಜ್ಯ ಸರ್ಕಾರವೇ ಪೂರ್ಣವಾಗಿ ಭರಿಸಬೇಕಾಗುತ್ತದೆಯೆಂದೂ ತಿಳಿಸಲಾಗಿದೆ. ಈ ಸಂಬಂಧ ಈಗಾಗಲೇ ಎಲ್ಲಾ ಅನುದಾನಿತ ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಅರ್ಹರಿರುವ ಎಲ್ಲಾ ಬೋಧಕ ಸಿಬ್ಬಂದಿವರ್ಗದವರಿಗೆ ದಿ:1-4-2010 ರಿಂದ 31-3-2011 ರವರಗಿನ ಅವಧಿಗೆ ವೇತನ ವ್ಯತ್ಯಾಸದ ಬಾಕಿಯನ್ನು ಸಹ ಬಿಡುಗಡೆ ಮಾಡಲಾಗಿದೆ.

1-1-2006 ರಿಂದ 31-3-2010 ರ ಅವಧಿಗೆ ಸಂಬಂಧಿಸಿದಂತೆ ಅನುದಾನಿತ ಇಂಜಿನೀಯರಿಂಗ್ ಕಾಲೇಜುಗಳ ಪ್ರಿನ್ಸಿಪಾಲರು ವೇತನ ಹಾಗೂ ಇತರೆ ಭತ್ಯೆಗಳ ವ್ಯತ್ಯಾಸದ ಬಿಲ್ಲುಗಳನ್ನು ಸಲ್ಲಿಸಿ ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಈ ಬಗ್ಗೆ ಉಲ್ಲೇಖ (2) ರಲ್ಲಿ ಕಾಣಿಸಲಾಗಿರುವ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್, ನವದೆಹಲಿ [ಎಐಸಿಟಿಇ] ಇವರ ಅಧಿಸೂಚನೆಯಲ್ಲಿ, ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಯನ್ನು ದಿನಾಂಕ:1.1.2006 ರಿಂದ ಅನ್ವಯಿಸುವಂತೆ ಜಾರಿಗೊಳಿಸಿದ್ದು, ದಿನಾಂಕ:1.1.2006 ರಿಂದ ದಿನಾಂಕ:31.3.2010 ರವರೆಗೆ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಬೋಧಕ ಸಿಬ್ಬಂದಿವರ್ಗದವರಿಗೆ ನೀಡಬೇಕಾಗಿರುವ ಬಾಕಿ ವೇತನವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಕ್ರಮವಾಗಿ 80:20 ರ ಅನುಪಾತದಲ್ಲಿ ಭರಿಸಬೇಕಾಗುವುದೆಂದೂ ತಿಳಿಸಿರುತ್ತದೆ.

ಆದ್ದರಿಂದ ಕೇಂದ್ರ ಸರ್ಕಾರ/ಎಐಸಿಟಿಇ/ಎಂಹೆಚ್‌ಆರ್‌ಡಿ ವತಿಯಿಂದ ಅನುದಾನ ಒದಗಿಸಿದ ನಂತರ 1-1-2006 ರಿಂದ 31-3-2010 ರವರಗಿನ ವೇತನ ವ್ಯತ್ಯಾಸದ ಬಿಲ್ಲುಗಳಿಗೆ ಅನುದಾನ ಬಿಡುಗಡೆ ಮಾಡುವುದನ್ನು ಪರಿಶೀಲಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು

ಇವರಿಗೆ:
ಎಲ್ಲಾ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.